

ಪ್ರತಿ ವರ್ಷ ಕೇಂದ್ರ ಬಜೆಟ್ ಮಂಡನೆಯಾದಾಗಲೆಲ್ಲ ವೇತನದಾರರ ಕಣ್ಣುಗಳಲ್ಲಿ ನಿರೀಕ್ಷೆ ಕಾಣಿಸುತ್ತದೆ. 2023ರ ಬಜೆಟ್ ಬಗೆಗಂತೂ ತೆರಿಗೆದಾರರು ಬಿಡುಗಣ್ಣಾಗಿದ್ದರು. ಚುನಾವಣಾ ಹಿನ್ನೆಲೆಯ ಕಾರಣದಿಂದಾಗಿ ಬಜೆಟ್‌ನಲ್ಲಿ ತೆರಿಗೆದಾರರಿಗೆ ಒಂದಷ್ಟು ಅನುಕೂಲ ದೊರೆಯಬಹುದೆನ್ನುವ ನಿರೀಕ್ಷೆಯಿತ್ತು. ಆ ನಿರೀಕ್ಷೆಯೇನೂ ಹುಸಿಯಾಗಿಲ್ಲ. ಕೇಂದ್ರ ಸರ್ಕಾರ ಹೊಸ ತೆರಿಗೆ ನೀತಿಯನ್ನು ಪರಿಚಯಿಸಿದೆ – ‘ಷರತ್ತುಗಳು ಅನ್ವಯಿಸುತ್ತವೆ’ ಎನ್ನುವ ಅಡಿ ಟಿಪ್ಪಣಿಯೊಂದಿಗೆ. ಈಗ ತೆರಿಗೆದಾರರ ಮುಂದಿರುವ ಪ್ರಶ್ನೆ – ಹಳೆಯ ತೆರಿಗೆ ಪದ್ಧತಿಯನ್ನು ಆಯ್ದುಕೊಳ್ಳುವುದಾ ಅಥವಾ ಹೊಸತಕ್ಕೆ ಬದಲಾಗುವುದಾ? ಈ ಪ್ರಶ್ನೆಗಳಿಗೆ ಸರಳವಾಗಿ ಉತ್ತರಿಸುವ ಪ್ರಯತ್ನ ಇಲ್ಲಿದೆ. ಸೂಕ್ತವಾದ ಆದಾಯ ತೆರಿಗೆ ಪಾವತಿ ಪದ್ಧತಿಯನ್ನು ಆಯ್ಕೆ ಮಾಡಿಕೊಳ್ಳುವ ನಿಟ್ಟಿನಲ್ಲಿ ಗಮನಿಸಬೇಕಾದ ವಿವರಗಳು ಇಲ್ಲಿವೆ.

**■ ಕಾವ್ಯಶ್ರೀ ಎನ್.**